2. ಕೊಟ್ಟಿಗೆಯನ್ನು ಕ್ರಿಮಿನಾಶಕ ದ್ರಾವಣದಿಂದ ಪ್ರತಿದಿನ ಸ್ವಚ್ಛವಾಗಿ ತೊಳೆದು ಚೊಕ್ಕಟವಾಗಿಡಬೇಕು.
3. ನಿಯಮಿತವಾಗಿ, ನಿಗದಿತ ಸಮಯಕ್ಕೇ, ಕೆಚ್ಚಲಿನಿಂದ ಪೂರ್ತಿಯಾಗಿ ಹಾಲು ಹಿಂಡಬೇಕು.
4. ಕೆಚ್ಚಲು ಮತ್ತು ಮೊಲೆತೊಟ್ಟುಗಳನ್ನು ಉಗುರುಬೆಚ್ಚಗಿನ ನೀರಿನಿಂದ ತೊಳೆದು, ಶುಭ್ರವಾದ ಬಟ್ಟೆಯಿಂದ ಒರೆಸಬೇಕು.
5. ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಂಡು ಹಾಲು ಹಿಂಡಬೇಕು.
6. ಹಿಂಡಿದ ನಂತರ, ರಾಸುಗಳ ಮೊಲೆತೊಟ್ಟುಗಳನ್ನು ಸೊಂಕುನಿವಾರಕ ದ್ರಾವಣದಲ್ಲಿ ಅದ್ದಬೇಕು. ನಂತರ ರಾಸುಗಳನ್ನು ಕನಿಷ್ಠ 20-30 ನಿಮಿಷ ಮಲಗಲು/ಕೂಡಲು ಬಿಡಬಾರದು. ಆ ಸಮಯದಲ್ಲಿ ಮೇವು/ಹಿಂಡಿ ನೀಡುವುದು ಸೂಕ್ತ.
7. ಕೆಚ್ಚಲುಬೇನೆ ಪೀಡಿತ ರಾಸುಗಳನ್ನು ಬೇರ್ಪಡಿಸಿ, ಅವುಗಳ ಹಾಲನ್ನು ಕೊನೆಯಲ್ಲಿ ಹಿಂಡಬೇಕು. ಕೆಟ್ಟಹಾಲನ್ನು ಹೊರಚೆಲ್ಲಬೇಕು.
8. ರಾಸುವಿನ ಸ್ವಸ್ಥ ಮೊಲೆಗಳಿಂದ ಹಾಲನ್ನು ಹಿಂಡಿ ತೆಗೆದಿಟ್ಟುಕೊಂಡು, ನಂತರ ಬೇನೆಯಿರುವ ಮೊಲೆಗಳಿಂದ ಹಾಲು ಹಿಂಡಿ ಹೊರಚೆಲ್ಲಬೇಕು.
9. ಕೆಚ್ಚಲಿಗಾಗುವ ಯಾವುದೇ ಗಾಯವನ್ನು, ತಕ್ಷಣ ಔಷಧೋಪಚಾರದಿಂದ ಗುಣಪಡಿಸಬೇಕು.
10. ರಾಸುಗಳ ಗರ್ಭಾವಧಿಯ ಕೊನೆಯ ಎರಡು ತಿಂಗಳು ಹಿಂಡುವುದನ್ನು ನಿಲ್ಲಿಸುವಾಗ ಕೆಚ್ಚಲಿನೊಳಗೆ ಸೂಕ್ತ ಪ್ರತಿಜೀವಕ ಔಷಧಿಯನ್ನು ಪಶುವೈದ್ಯರಿಂದ ಹಾಕಿಸಬೇಕು.
11. ರಾಸುಗಳನ್ನು ಕೊಳ್ಳುವಾಗ ಪಶುವೈದ್ಯರಿಂದ ಕೆಚ್ಚಲಿನ ಸ್ಥಿತಿಯನ್ನು ಪರೀಕ್ಷಿಸಿ ಖರೀದಿಸಬೇಕು.
12. ಹಾಲು ಹಿಂಡುವ ಯಂತ್ರವನ್ನು ಬಳಸುವುದರಿಂದ ಕೆಚ್ಚಲುಬೇನೆ ತಡೆಯಬಹುದು.
13. ಹಾಲು ಹಿಂಡುವ ಯಂತ್ರದ ಕಪ್ಪನ್ನು ಒಂದು ರಾಸುವಿನಿಂದ ಇನ್ನೊಂದು ರಾಸುವಿನ ಕೆಚ್ಚಲಿಗೆ ಜೋಡಿಸುವ ಮೊದಲು ಅವುಗಳನ್ನು ಸ್ವಚ್ಛವಾಗಿ ಸೊಂಕುನಿವಾರಕ ದ್ರಾವಣದಲ್ಲಿ ತೊಳೆದಿರಬೇಕು.

### ಅವ್ಯಕ್ತ ಕೆಚ್ಚಲುಬೇನೆ

ಅವ್ಯಕ್ತ ಕೆಚ್ಚಲುಬೇನೆಯಲ್ಲಿ ಕೆಚ್ಚಲಿನ ಬಾವು, ಕೆಂಪಗಾಗುವಿಕೆ, ನೋವು, ಜ್ವರ, ಕೆಟ್ಟ ಹಾಲು ಮುಂತಾದ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಆದರೆ ರಾಸು ಈ ಬೇನೆಯಿಂದ ಬಳಲುತ್ತಿರುತ್ತದೆ. ಹಾಲಿನ ಇಳುವರಿಯು ಸ್ವಲ್ಪ ಕಡಿಮೆಯಾಗಿರುತ್ತದೆ. ಈ ಬೇನೆಯಿಂದ ಆಗುವ ಪ್ರಮುಖ ಸಂಕಷ್ಟಗಳು ಈ ಕೆಳಗಿನಂತಿವೆ......

- ಸಾಧಾರಣವಾಗಿ, ಗಮನಕ್ಕೆ ಬಾರದಷ್ಟು ಕಡಿಮೆ ಪ್ರಮಾಣದಲ್ಲಿ ಹಾಲಿನ ಇಳುವರಿ ಕುಂಠಿತಗೊಂಡಿರುತ್ತದೆ. ಒಂದು ಕರಾವಿನ ಲೆಕ್ಕ ಹಿಡಿದರೆ ಇದು ದೊಡ್ಡ ನಷ್ಟ.
- ಕಡಿಮೆ ಇಳುವರಿಯಿಂದ ಕಡಿಮೆ ಆದಾಯ, ಕಡಿತಗೊಂಡ ಲಾಭ.
- ಸಾಮಾನ್ಯವಾಗಿ ಗಮನಕ್ಕೆ ಬಾರದ ಈ ಬೇನೆಯು ಇತರೆ ರಾಸುಗಳಿಗೂ ಹರಡಬಹುದು, ಇದರಿಂದ ಹೆಚ್ಚಿದ ನಷ್ಟ.
- ಪೂರ್ಣಪ್ರಮಾಣದ ಕೆಚ್ಚಲುಬೇನೆಯಾಗಿ ಪರಿವರ್ತಿತಗೊಳ್ಳಬಹುದು.

ಲಕ್ಷಣಗಳಿರದ ಈ ಬೇನೆಯನ್ನು ಗುರುತಿಸುವುದು ತುಂಬಾ ಕಷ್ಟವಾದರೂ, ರಾಸಾಯನಿಕ ಪರೀಕ್ಷೆಗಳ ಮುಖಾಂತರ ಪತ್ತೆ ಹಚ್ಚಬಹುದು. ನಂತರ ಪಶುವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸಿ ಉತ್ಪಾದನೆ ಮತ್ತು ಲಾಭ ಹೆಚ್ಚಿಸಿಕೊಳ್ಳಬಹುದು.

ಸುಜಲಾ-III ಯೋಜನೆಯ ಆಯ್ದ ಗ್ರಾಮಗಳಲ್ಲಿ, ಅವ್ಯಕ್ತ ಕೆಚ್ಚಲುಬೇನೆ ಪತ್ತೆ ಮತ್ತು ಚಿಕಿತ್ಸಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

- ಮೊದಲು, ಗ್ರಾಮದ ಪ್ರತಿಯೊಬ್ಬ ಹೈನುಗಾರರ ಮನೆಯಿಂದ ಹಾಲಿನ ಮಾದರಿ ಪಡೆದು, ರಾಸಾಯನಿಕ ಪರೀಕ್ಷೆಗೊಳಪಡಿಸಲಾಗುವುದು.
- ಯಾವ ಹೈನುಗಾರರ ಹಾಲಿನಿಂದ ಅವ್ಯಕ್ತ ಕೆಚ್ಚಲುಬೇನೆ ಇರುವುದು ಪತ್ತೆಯಾಗುವುದೋ, ಆ ಹೈನುಗಾರರ ಪ್ರತಿಯೊಂದು ರಾಸುವಿನಿಂದ ಹಾಲಿನ ಮಾದರಿಗಳನ್ನು ಪ್ರತ್ಯೇಕವಾಗಿ ಪಡೆದು ಮರುಪರೀಕ್ಷಿಸಲಾಗುವುದು.
- ಈಗ ಅವ್ಯಕ್ತ ಕೆಚ್ಚಲುಬೇನೆ ಇರುವ ರಾಸುವನ್ನು ನಿಖರವಾಗಿ ಗುರುತಿಸಿದ್ದು, ಇದರ ನಾಲ್ಕೂ ಮೊಲೆಗಳಿಂದ ಪ್ರತ್ಯೇಕವಾಗಿ ಹಾಲಿನ ಮಾದರಿಯನ್ನು ಪರೀಕ್ಷಿಸಿ, ಬೇನೆ ಇರುವ ಭಾಗವನ್ನು ನಿಖರವಾಗಿ ಗುರುತಿಸಲಾಗುವುದು.



ಹೀಗೆ ಪತ್ತೆಹಚ್ಚಲಾದ ರಾಸುವಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಇದರಿಂದ ರಾಸುವಿನ ಆರೋಗ್ಯದಲ್ಲಿ ಮತ್ತು ಹಾಲಿನ ಉತ್ಪಾದನೆಯಲ್ಲಿ ಸುಧಾರಣೆಯಾಗಿ, ಕೆಚ್ಚಲುಬೇನೆ ಹಾಗೂ ಅದರ ಹರಡುವಿಕೆಯು ನಿಯಂತ್ರಣವಾಗಿ, ಹೈನುಗಾರರ ಆರ್ಥಿಕ ಲಾಭ ಹೆಚ್ಚುತ್ತದೆ. ಅಲ್ಲದೇ ಶುದ್ಧ ಹಾಲು ಉತ್ಪಾದನೆಗೂ ಇದು ಪೂರಕ.

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**
**ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ**

**ವಿಶ್ವಬ್ಯಾಂಕ್ ಅನುದಾನಿತ ಸುಜಲಾ-IIIರ ಅಡಿ**
**"ಜಾನುವಾರು ಆಧಾರಿತ ವಿಸ್ತರಣಾ ಚಟುವಟಿಕೆಗಳು"**

# "ಹೈನುರಾಸುಗಳಲ್ಲಿ ಕೆಚ್ಚಲುಬೇನೆ"



ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಪ್ರಧಾನ ಸಂಶೋಧಕರು**
ಕೆಡಬ್ಲ್ಯೂಡಿಪಿ-II, ಸುಜಲಾ-III ಯೋಜನೆ, ಬೀದರ ಘಟಕ,
ಪಶುವೈದ್ಯಕೀಯ & ಪಶುಸಂಗೋಪನಾ ವಿಸ್ತರಣಾ ವಿಭಾಗ
**ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ**
ದೂರವಾಣಿ : 08482-245084
ಇ-ಮೇಲ್ - vcbsujala@gmail.com

ತಾಂತ್ರಿಕ ಮಾಹಿತಿ
ಡಾ. ಅನಂತರಾವ ದೇಸಾಯಿ
ಡಾ. ಪ್ರಕಾಶಕುಮಾರ ರಾಠೋಡ
ಡಾ. ಶಿವಮೂರ್ತಿ
ಡಾ. ಚನ್ನಪ್ಪಗೌಡ ಬಿರಾದಾರ
ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

ಹೈನುಗಾರಿಕೆಯು, ಒಂದು ಲಾಭದಾಯಕ ಕಸುಬು. ಇದು ವರ್ಷಪೂರ್ತಿ ಉದ್ಯೋಗ, ನಿರಂತರ ಆದಾಯ, ಕುಟುಂಬಕ್ಕೆ ಪೌಷ್ಠಿಕ ಆಹಾರ, ಕೃಷಿ ಭೂಮಿಗೆ ಗೊಬ್ಬರ ಒದಗಿಸುತ್ತಾ ರೈತರ ಜೀವನಾಧಾರವಾಗಿದೆ. ಇಂದು ಹೈನುಗಾರಿಕೆಯು ದೊಡ್ಡ ಉದ್ಯಮವಾಗಿ ಬೆಳೆದು ನಿಂತಿದೆ. ಇತ್ತೀಚಿನ ದಿನಗಳಲ್ಲಿ, ಹೆಚ್ಚಿನ ಜನರು ಹೈನುಗಾರಿಕೆಯನ್ನು ಏಕ ಉದ್ಯೋಗ ಅಥವಾ ಮೂಲ ಉದ್ಯೋಗವನ್ನಾಗಿಸಿಕೊಂಡು ಹೆಚ್ಚಿನ ಆದಾಯ ಗಳಿಸಿ ಯಶಸ್ವಿಯಾಗಿದ್ದಾರೆ.

ಹೈನುಗಾರಿಕೆಯಲ್ಲಿ ಆದಾಯ ಗಳಿಕೆಗೆ ಅನೇಕ ಅಡೆತಡೆಗಳುಂಟು. ರಾಸುಗಳಲ್ಲಿ ಕಂಡುಬರುವ ರೋಗಗಳು ಹೈನೋದ್ಯಮಕ್ಕೆ ಮಾರಕವಾಗಿವೆ. ಈ ರೋಗಗಳಲ್ಲಿ ಕೆಚ್ಚಲುಬೇನೆಯು ಅತಿ ಪ್ರಮುಖವಾದದ್ದು. ಇದು ರಾಸುವನ್ನು ಬಾಧಿಸುವುದಲ್ಲದೇ ಇಳುವರಿ ಕುಂಠಿತಗೊಳಿಸಿ ಅದರನ್ವಯ ಆದಾಯ ಮತ್ತು ಲಾಭ ಇಳಿಮುಖವಾಗಿಸುತ್ತದೆ.

## ಕೆಚ್ಚಲುಬೇನೆ



ಕೆಚ್ಚಲು ಗ್ರಂಥಿಗಳಿಗೆ ಉರಿಯೂತ ಉಂಟಾಗಿ ಹಾಲು ಕೆಟ್ಟಾಗ, ಕೆಚ್ಚಲುಬೇನೆ ಅಥವಾ ಕೆಚ್ಚಲಬಾವು ಆಗಿದೆಯೆಂದು ಹೇಳಬಹುದು. ಇದು ಹಸು, ಎಮ್ಮೆ, ಕುರಿ, ಮೇಕೆ ಮುಂತಾದವುಗಳಲ್ಲಿ ಕಂಡುಬಂದರೂ ಅಧಿಕ ಹಾಲು ಕೊಡುವ ಮಿಶ್ರತಳಿ ಹಸುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

## ಕೆಚ್ಚಲುಬೇನೆಗೆ ಕಾರಣಗಳು

* ಕೆಚ್ಚಲುಬೇನೆಗೆ ಬ್ಯಾಕ್ಟೀರಿಯಾ, ವೈರಸ್, ಶಿಲೀಂದ್ರಗಳಂತಹ ವಿವಿಧ ಜೀವಾಣುಗಳು ಮತ್ತು ವಿಷಾಣುಗಳು, ಕಾರಣವಾಗಿವೆ.
* ಹೈನು ರಾಸುಗಳನ್ನು ನಿಗದಿತ ಸಮಯಕ್ಕೆ, ನಿಯಮಿತವಾಗಿ, ಪೂರ್ತಿಯಾಗಿ ಹಿಂಡದಿದ್ದರೆ, ಕೆಚ್ಚಲಿನ ಗ್ರಂಥಿಗಳಲ್ಲಿ ಉಳಿದಿರುವ ಹಾಲಿನಲ್ಲಿ ರೋಗಾಣುಗಳು ಉಲ್ಬಣಗೊಂಡು ಕೆಚ್ಚಲುಬೇನೆಯನ್ನುಂಟು ಮಾಡುತ್ತವೆ.
* ಯಾವುದೇ ಕಾರಣಗಳಿಂದಾಗಿ ಕೆಚ್ಚಲಿಗೆ ಪೆಟ್ಟು ಅಥವಾ ಗಾಯವಾದಾಗ ಕೆಚ್ಚಲುಬೇನೆ ಉಂಟಾಗುತ್ತದೆ.
* ಸ್ವಚ್ಛವಾಗಿರದ ನೆಲದ ಮೇಲೆ ರಾಸುಗಳು ಮಲಗಿದಾಗ, ರೋಗಾಣುಗಳು ಮೊಲೆತೊಟ್ಟುಗಳ ಮೂಲಕ ಕೆಚ್ಚಲು ಗ್ರಂಥಿಗಳನ್ನು ಸೇರಿಕೊಂಡು ಕೆಚ್ಚಲುಬೇನೆಯನ್ನುಂಟು ಮಾಡುತ್ತವೆ.
* ಕಾಲುಬಾಯಿ ಜ್ವರ, ಸಿಡುಬು ಮುಂತಾದ ರೋಗಗಳಲ್ಲಿ ಕೆಚ್ಚಲುಬೇನೆಯೂ ಕಾಣಿಸಿಕೊಳ್ಳಬಹುದು.
* ಹಾಲು ಹಿಂಡುವ ವ್ಯಕ್ತಿಗಳ ಕೈಗಳು ಸ್ವಚ್ಛವಾಗಿರದಿದ್ದರೆ, ಕೆಚ್ಚಲುಬೇನೆ ಬಂದ ರಾಸುವನ್ನು ಹಿಂಡಿ ನಂತರ ಕೈ ತೊಳೆಯದೇ ಆರೋಗ್ಯವಂತ ರಾಸುಗಳನ್ನು ಹಿಂಡಿದರೆ ಕೆಚ್ಚಲುಬೇನೆಗೆ ಕಾರಣವಾಗುತ್ತದೆ.

## ಕೆಚ್ಚಲುಬೇನೆಯ ಲಕ್ಷಣಗಳು

* ಕೆಚ್ಚಲುಬೇನೆಯಾದಾಗ ಮೊಲೆಗಳು ಮತ್ತು ಕೆಚ್ಚಲಿನ ಭಾಗಗಳು ಕೆಂಪಾಗಿ ಊದಿಕೊಂಡಿರುತ್ತದೆ, ಮುಟ್ಟಿದರೆ ಬಿರುಸಾಗಿ, ಬಿಸಿಯಾಗಿದ್ದು, ರಾಸುಗಳು ನೋವನ್ನು ವ್ಯಕ್ತಪಡಿಸುತ್ತವೆ.
* ಊದಿಕೊಂಡಿರುವ ಭಾಗದಿಂದ ಹಾಲು ನೀರಿನಂತೆ ಅಥವಾ ರಕ್ತಮಿಶ್ರಿತವಾಗಿ ಅಥವಾ ಒಡೆದ ಹಾಲಿನಂತೆ ಗಡ್ಡೆಗಡ್ಡೆಯಾಗುವುದು.
* ನಂತರದ ದಿನಗಳಲ್ಲಿ ಹಾಲು, ಕೀವಿನಿಂದ ಅಥವಾ ರಕ್ತ ಮತ್ತು ಕೀವಿನಿಂದ ಮಿಶ್ರಿತವಾಗುವುದು. ಕೆಚ್ಚಲ ಭಾಗವು ಗಟ್ಟಿಯಾಗಬಹುದು.





* ಹಾಲಿನ ಉತ್ಪಾದನೆ ಕಡಿಮೆಯಾಗಿ ಕ್ರಮೇಣ ಹಾಲು ಬರುವುದೇ ನಿಂತು ಹೋಗುವುದು.
* ಕೆಲವೊಮ್ಮೆ ರಾಸುಗಳು ಜ್ವರಪೀಡಿತವಾಗಿ, ಮೇವು ನೀರು ಮುಟ್ಟದೇ ನಿಶಕ್ತವಾಗಿ ಬಳಲಬಹುದು.
* ಕೆಚ್ಚಲುಬೇನೆ ಅತಿ ತೀವ್ರ ರೂಪದಲ್ಲಿದ್ದರೆ ರಾಸುಗಳು ಸಾವನ್ನಪ್ಪಬಹುದು.

## ಕೆಚ್ಚಲುಬೇನೆಯ ತಪಾಸಣೆ

* ಕೆಚ್ಚಲಿನ ಗಾತ್ರ, ಆಕಾರ, ಬಣ್ಣಗಳಲ್ಲಿ ಬದಲಾವಣೆಗಳಿಂದ ಮತ್ತು ಹಾಲಿನ ಬಣ್ಣ, ವಾಸನೆ, ಸಾಂದ್ರತೆ ಇವುಗಳಲ್ಲಿನ ಬದಲಾವಣೆಗಳಿಂದ ಕೆಚ್ಚಲುಬೇನೆಯನ್ನು ಗುರುತಿಸಬಹುದು.
* ಶುಭ್ರವಾದ ಪಾತ್ರೆಯಲ್ಲಿ, ಜಾಗ್ರತೆಯಿಂದ ಹಾಲು ಕಾಯಿಸಿದಾಗ, ಹಾಲು ಒಡೆಯುತ್ತದೆ.
* ಸಿ.ಎಂ.ಟಿ ಪರೀಕ್ಷೆಯ ಮೂಲಕ ರಾಸುಗಳ ಕೊಟ್ಟಿಗೆಯಲ್ಲಿಯೇ ಹಾಲಿನ ಪರೀಕ್ಷೆ ನಡೆಸಿ ಕೆಚ್ಚಲುಬೇನೆಯನ್ನು ಖಚಿತಪಡಿಸಿಕೊಳ್ಳಬಹುದು.
* ಸಂಶಯಾತ್ಮಕ ರಾಸುಗಳ ಹಾಲನ್ನು ಪಶುವೈದ್ಯರ ಸೂಚನೆಯಂತೆ ಪ್ರಯೋಗಾಲಯದ ಪರೀಕ್ಷೆಗಳಿಂದ ಖಚಿತಪಡಿಸಿಕೊಳ್ಳಬಹುದು.



## ಕೆಚ್ಚಲುಬೇನೆಯ ಚಿಕಿತ್ಸೆ

* ಕೆಚ್ಚಲುಬೇನೆ ಕಾಣಿಸಿಕೊಂಡ ತಕ್ಷಣ, ಬೇನೆ ಉಂಟಾಗಿರುವ ಕೆಚ್ಚಲಿನ ಭಾಗದಿಂದ ಪೂರ್ತಿಯಾಗಿ ಹಾಲನ್ನು ಹಿಂಡಿ, ಹೊರಚೆಲ್ಲಬೇಕು. ಈ ರೀತಿ ಪ್ರತಿ 2–3 ಗಂಟೆಗೊಮ್ಮೆಯಂತೆ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸುವವರೆಗೂ ಮಾಡಬೇಕು.
* ಮಂಜುಗಡ್ಡೆ (ಬರ್ಫ) ತುಂಡುಗಳನ್ನು ಬಟ್ಟೆಯಿಂದ ಕೆಚ್ಚಲಿಗೆ ಕಟ್ಟಬೇಕು ಅಥವಾ ಕೆಚ್ಚಲನ್ನು ತಣ್ಣೀರಿನಿಂದ ತಟ್ಟಬೇಕು.
* ಪಶುವೈದ್ಯರಲ್ಲಿಗೆ ಕರೆದೊಯ್ದು ಸೂಕ್ತ ಚಿಕಿತ್ಸೆ ಕೊಡಿಸಬೇಕು.
* ಕೆಚ್ಚಲಿನೊಳಗೆ ಸೂಕ್ತ ಪ್ರತಿಜೀವಕ ಔಷಧಿಯನ್ನು ಪಶುವೈದ್ಯರು ಹಾಕಿದಾಗ, ಅವರು ಸೂಚಿಸಿದಂತೆ 12–24 ಗಂಟೆಗಳ ನಂತರ ಆ ಭಾಗದಿಂದ ಪೂರ್ತಿಯಾಗಿ ಹಾಲನ್ನು ಹಿಂಡಿ, ನಂತರ ಅದನ್ನು ಹೊರಗೆ ಚೆಲ್ಲಿಬಿಡಬೇಕು. ಹೀಗೆ ಪ್ರತಿ 12–24 ಗಂಟೆಗಳಿಗೊಮ್ಮೆ ಕೆಚ್ಚಲಿನೊಳಗೆ ಜೀವಾಣು ನಿರೋಧಕ ಔಷಧಿಯನ್ನು ಪಶುವೈದ್ಯರಿಂದ ಹಾಕಿಸಬೇಕು.



ಪ್ರಾರಂಭಿಕ ಹಂತದಲ್ಲಿಯೇ ಕೆಚ್ಚಲುಬೇನೆಯನ್ನು ಗುರುತಿಸಿ ಸೂಕ್ತ ಚಿಕಿತ್ಸೆ ಮಾಡಿಸಿದಲ್ಲಿ, ಬೇನೆಯನ್ನು ಸಂಪೂರ್ಣವಾಗಿ ಗುಣಪಡಿಸಿ ಸಮರ್ಪಕ ಹಾಲು ಉತ್ಪಾದನೆಯನ್ನು ಪಡೆಯಬಹುದು ಮತ್ತು ಆರ್ಥಿಕ ನಷ್ಟವನ್ನು ತಡೆಗಟ್ಟಬಹುದು.

ಕೆಚ್ಚಲುಬೇನೆಯನ್ನು ನಿರ್ಲಕ್ಷಿಸಿದಲ್ಲಿ, ಬೇನೆ ಉಂಟಾದ ಕೆಚ್ಚಲ ಭಾಗದಿಂದ ಹಾಲಿನ ಉತ್ಪಾದನೆ ಕಡಿಮೆಯಾಗಿ ಕ್ರಮೇಣ ಹಾಲು ಬರುವುದೇ ನಿಂತು ಹೋಗುತ್ತದೆ. ಅದಲ್ಲದೇ, ಕೆಟ್ಟ ಹಾಲು ಬಳಸಲು/ ಕರುವಿಗೆ ಕುಡಿಸಲು ಯೋಗ್ಯವಿರುವುದಿಲ್ಲ. ಕೆಚ್ಚಲಿನ ಒಂದು ಭಾಗದಿಂದ ಇನ್ನೊಂದು ಭಾಗಕ್ಕೂ ಕೆಚ್ಚಲುಬೇನೆ ಹರಡುತ್ತದೆ. ಮುಂದೆ ಆ ಭಾಗ ಗಟ್ಟಿಯಾಗಿ, ಆಕಾರದಲ್ಲಿ ಇಂಗಿದಂತೆ ಗಡ್ಡೆಯಂತೆ ಭಾಸವಾಗುತ್ತದೆ. ಮುಂದಿನ ಕರಾವಿನಲ್ಲಿಯೂ ಬೇನೆ ಉಂಟಾಗಿದ್ದ ಭಾಗದಿಂದ ಹಾಲು ಬರದೆ ಇರಬಹುದು.

## ಕೆಚ್ಚಲುಬೇನೆಯ ನಿಯಂತ್ರಣ

1. ರಾಸುಗಳನ್ನು ಕಟ್ಟುವ ಸ್ಥಳದಲ್ಲಿ ನೆಲವು, ಕಲ್ಲು, ಹರಳು, ಮುಳ್ಳುಗಳಿರದೆ ನಯವಾಗಿರಬೇಕು.